ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರು, ಬೆಂಗಳೂರು ಇವರ ಕಚೇರಿ ನಡವಳಿಗಳು

ವಿಷಯ: ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಗೆ 2017-18ನೇ ಸಾಲಿನಲ್ಲಿ ಸೆಪ್ಟೆಂಬರ್ 2017 ರ ಮಾಹೆಗೆ ಸಹಾಯನುದಾನ ಬಿಡುಗಡೆ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಇಡಿ 184 ಟಿಪಿಇ 2009 ದಿ: 27-7-2010
2) ಸರ್ಕಾರಿ ಆದೇಶ ಸಂಖ್ಯೆ: ಇಡಿ 184 ಟಿಪಿಇ 2009 ದಿ: 2-3-2010
3) ಸರ್ಕಾರಿ ಪತ್ರ ಸಂಖ್ಯೆ: ಇಡಿ 368 ಟಿಪಿಇ 2010 ದಿ: 16-5-2012
4) ನಿರ್ದೇಶನಾಲಯದ ಪತ್ರ ಡಿಟಿಇ/ಟೆಕ್ವಿಪ್/ಎಫ್ಐಎನ್/ಸಿಆರ್-04/2016-17, ದಿ:21-8-17

-೦೦೦-

ಪ್ರಸ್ತಾವನೆ:

ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ, ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಟ್ಟಿರುವ ಎಲ್ಲಾ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳ ಸಿಬ್ಬಂದಿ ವರ್ಗದವರುಗಳಿಗೆ ಸರ್ಕಾರದ ಪಾಲಿನ ಸಹಾಯನುದಾನದ ಶೇ.85ರಷ್ಟು ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ ಮೂಲಕ ನೇರವಾಗಿ ಪ್ರತೀ ತಿಂಗಳು ಜಮೆ ಮಾಡುವ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ತಾಂತ್ರಿಕ ಶಿಕ್ಷಣ ನಿರ್ದೇಶಕರಿಗೆ ಆದೇಶವನ್ನು ನೀಡಿರುತ್ತದೆ.

ಉಲ್ಲೇಖ (3)ರ ಆದೇಶದಲ್ಲಿ, 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರೂ' ನ್ನು "ನೋಡಲ್ ಬ್ಯಾಂಕ್" ಎಂದು ಗುರುತಿಸಿ ಅನುದಾನಿತ ಸಂಸ್ಥೆಗಳ ಎಲ್ಲಾ ಸಿಬ್ಬಂದಿ ವರ್ಗದವರು ಕಡ್ಡಾಯವಾಗಿ ತಮ್ಮ ತಮ್ಮ ಸಂಸ್ಥೆಗಳಿಗೆ ಹತ್ತಿರವಿರುವ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ನ ಶಾಖೆಗಳಲ್ಲಿ ಉಳಿತಾಯ ಖಾತೆಗಳನ್ನು ತೆರೆಯಬೇಕೆಂಬ ನಿಬಂಧನೆಯನ್ನು ವಿಧಿಸಿ, ಆ ದಿನಾಂಕದವರೆವಿಗೂ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ನ ಶಾಖೆಗಳಲ್ಲಿ ಉಳಿತಾಯ ಖಾತೆಗಳನ್ನು ಹೊಂದಿರುವ ಹಾಗೂ 2009-10ನೇ ಸಾಲಿನಲ್ಲಿ ಸಂಗ್ರಹಿಸಲಾಗಿರುವ ಬೋಧನಾ ಶುಲ್ಕದಲ್ಲಿ ಸರ್ಕಾರದ ಪಾಲಿನ ಶೇ.50ರಷ್ಟು ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿರುವ ಒಟ್ಟು 39 ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೆ ಸಹಾಯನುದಾನವನ್ನು ಪಾವತಿಸಲು ಆದೇಶಿಸಿರುತ್ತದೆ.

ಈ ಕೆಳಕಂಡ ಅನುದಾನಿತ ಸಂಸ್ಥೆಗಳು, ತಮ್ಮ ಸಂಸ್ಥೆಗಳ ಆವರಣದಲ್ಲಿಯೇ ಹಲವಾರು ವರ್ಷಗಳಿಂದ ರಾಷ್ಟ್ರೀಕೃತ ಬ್ಯಾಂಕ್‌ಗಳ ಶಾಖೆಗಳನ್ನು ಹೊಂದಿದ್ದು, ತಮ್ಮ ಸಂಸ್ಥೆಯ ಸಿಬ್ಬಂದಿ ವರ್ಗದವರುಗಳಿಗೆ ಸದರಿ ಬ್ಯಾಂಕ್‌ಗಳ ಮೂಲಕವೇ ಸಹಾಯನುದಾನವನ್ನು ವಿತರಿಸಬೇಕೆಂದು ಸರ್ಕಾರವನ್ನು ಕೋರಿರುವ ಮೇರೆಗೆ ದಿನಾಂಕ: 22-5-2010 ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಇಲಾಖೆಗೆ ನಿರ್ದೇಶನವನ್ನು ನೀಡಲಾಗಿದೆ. ಈ ಬಗ್ಗೆ ಸೂಕ್ತ ಆದೇಶವನ್ನು ನೀಡುವಂತೆ ಈಗಾಗಲೇ ಸರ್ಕಾರವನ್ನು ಕೋರಲಾಗಿದೆ.

ಈ ಸಂಬಂಧ ಸರ್ಕಾರವು ಉಲ್ಲೇಖ(4)ರ ಪತ್ರದಲ್ಲಿ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಅನ್ನು "ನೋಡಲ್ ಬ್ಯಾಂಕ್" ಎಂದು ಗುರುತಿಸಿ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಸದರಿ ಬ್ಯಾಂಕ್ ಮೂಲಕ 'ಇಸಿಎಸ್' ಪದ್ಧತಿಯಲ್ಲಿ ಸಹಾಯನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ. ಆದರೆ ಸದರಿ ಸಂಸ್ಥೆಗಳ

ಸಿಬ್ಬಂದಿ ವರ್ಗದವರು ಬ್ಯಾಂಕ್ ಖಾತೆ ತೆರೆಯಲು ಕಾಲವಕಾಶ ನೀಡಬೇಕಾಗಿರುವುದರಿಂದ ಹಳೇ ಪದ್ಧತಿಯಲ್ಲಿ ಸಹಾಯನುದಾನವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

ಈಗ, ಈ ಕೆಳಕಂಡ ಅನುದಾನಿತ ಸಂಸ್ಥೆಗಳಿಗೆ ಅವುಗಳು ಇಲಾಖೆಗೆ ಸಲ್ಲಿಸಿರುವ ಕ್ಲೇಮಿನ ಆಧಾರದ ಮೇಲೆ ಸರ್ಕಾರದ ಪಾಲಿನ ಶೇ.85 ರಷ್ಟು ಮೊತ್ತವನ್ನು ಕೆಳಕಂಡ ಪಟ್ಟಿಯ ಕಾಲಂ(4) ರಲ್ಲಿ ಕಾಣಿಸಿರುವಂತೆ ಸೆಪ್ಟೆಂಬರ್ 2017 ರ ಮಾಹೆಗೆ ಸಹಾಯನುದಾನವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

**ಅನುಬಂಧ**

| ಕ್ರ.ಸಂ | ಸಂಸ್ಥೆಯ ಹೆಸರು | ಸೆಪ್ಟೆಂಬರ್ 2017 ರ ಮಾಹೆಗೆ ಪ್ರಿನ್ಸಿಪಾಲರು ಕ್ಲೇಮು ಮಾಡಿರುವ 100% ಮೊತ್ತ (ರೂ.ಗಳಲ್ಲಿ) | ಸಂಸ್ಥೆಗೆ ಬಿಡುಗಡೆ ಮಾಡಲಾದ ಒಟ್ಟು ಸಹಾಯನುದಾನದ 85% ಮೊತ್ತ (ರೂ.ಗಳಲ್ಲಿ) |
|---|---|---|---|
| 1 | 2 | 3 | 4 |
| 1 | ಶ್ರೀ ಜಯಚಾಮರಾಜೇಂದ್ರ ಕಾಲೇಜು ಇಂಜಿನಿಯರಿಂಗ್, ಮೈಸೂರು. | 16841951 | 14315658 |
| 2 | ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು. | 11288558 | 9595274 |
| **ಒಟ್ಟು ರೂ.** | | **28130509** | **23910932** |

ಮೇಲೆ ವಿವರಿಸಿರುವಂತೆ ಮೇಲ್ಕಂಡ ಅನುದಾನಿತ ಸಂಸ್ಥೆಗಳಿಗೆ ಕಾಲಂ(4) ರಲ್ಲಿ ಕಾಣಿಸಿರುವ ಒಟ್ಟು ಮೊತ್ತ ರೂ.23910932/-(ರುಪಾಯಿ ಎರಡು ಕೋಟಿ ಮುವತ್ತೊಂಬತ್ತು ಲಕ್ಷದ ಹತ್ತು ಸಾವಿರದ ಒಂಬೈನೂರಾ ಮುವತ್ತೆರಡು ಮಾತ್ರ)ಗಳನ್ನು ಬಿಡುಗಡೆಗೊಳಿಸಲು ನಿರ್ಧರಿಸಲಾಗಿದೆ. ಆದುದರಿಂದ, ಈ ಕೆಳಕಂಡ ಆದೇಶ.

ಆದೇಶ

**ಸಂಖ್ಯೆ: ಡಿಟಿಇ 41 ಜಿಆರ್‌ಟಿ(2) 2017 ಬೆಂಗಳೂರು, ದಿನಾಂಕ: 7-10-17**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಮೇಲ್ಕಂಡ ಪಟ್ಟಿಯ ಕಾಲಂ (2)ರಲ್ಲಿ ಕಾಣಿಸಿರುವ ಅನುದಾನಿತ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ, ಕಾಲಂ(4)ರಲ್ಲಿ ಕಾಣಿಸಿರುವ ರೂ.23910932/-(ರುಪಾಯಿ ಎರಡು ಕೋಟಿ ಮುವತ್ತೊಂಬತ್ತು ಲಕ್ಷದ ಹತ್ತು ಸಾವಿರದ ಒಂಬೈನೂರಾ ಮುವತ್ತೆರಡು ಮಾತ್ರ)ಗಳನ್ನು ಸರ್ಕಾರದ ಪಾಲಿನ ಸಹಾಯನುದಾನವಾಗಿ ಸೆಪ್ಟೆಂಬರ್ 2017 ರ ಮಾಹೆಗೆ ಸಂಬಂಧಿಸಿದಂತೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಡಿಸಿ ಬಿಡುಗಡೆ ಮಾಡಲಾಗಿದೆ ಹಾಗೂ ಈ ಮೊತ್ತವನ್ನು ಸಿ.ಟಿ.ಎಸ್.8ರಲ್ಲಿ ಡ್ರಾ ಮಾಡಿ ವಿತರಿಸಲು ಆದೇಶಿಸಲಾಗಿದೆ.

**ಷರತ್ತು ಮತ್ತು ನಿಬಂಧನೆಗಳು:**

1) ಈಗ ಬಿಡುಗಡೆ ಮಾಡಿರುವ ಅನುದಾನವನ್ನು ಆಯಾ ಸಂಸ್ಥೆಗಳು ಸಲ್ಲಿಸಿರುವ ಬಿಲ್ಲುಗಳನುಸಾರ, ಉಲ್ಲೇಖ(2)ರ ಸರ್ಕಾರದ ಆದೇಶದನ್ವಯ ಸರ್ಕಾರದ ಪಾಲಿನ ಶೇ.85ರಷ್ಟು ಮೊತ್ತವನ್ನು ಪರಿಗಣಿಸಲಾಗಿದೆ. ಆದುದರಿಂದ, ಈ ಪಾವತಿಯು ಇಲಾಖೆಯ ಕೂಲಂಕಷ ಲೆಕ್ಕತಪಾಸಣೆಗೆ ಒಳಪಟ್ಟಿರುತ್ತದೆ.
2) ಲೆಕ್ಕ ತಪಾಸಣೆಯಲ್ಲಿ ಹೆಚ್ಚುವರಿ ಅನುದಾನವು ಪಾವತಿಯಾಗಿರುವುದು ಕಂಡುಬಂದಲ್ಲಿ, ಆಯಾ ಸಂಸ್ಥೆಗಳಿಂದ ಇಲಾಖೆಯು ನಿರ್ಧರಿಸುವ ರೀತಿಯಲ್ಲಿ ವಸೂಲಿಸಲಾಗುವುದು.
3) 2016-17 ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ 'ಬಳಕೆ ಪ್ರಮಾಣಪತ್ರ' ಹಾಗೂ 'ಸಿಎ' ದೃಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.
4) ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2203-ತಾಂತ್ರಿಕ ಶಿಕ್ಷಣ-00-104-ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ-0-01 ಸರ್ಕಾರೇತರ ತಾಂತ್ರಿಕ ಶಾಲೆಗಳು-101 ಸಹಾಯಾನುದಾನ [2203-00-104-0-01-101) ಅಡಿ 2017-18 ರ ಸಾಲಿನ ಆಯವ್ಯಯದಲ್ಲಿ ಭರಿಸತಕ್ಕದ್ದು.
5) ಪ್ರಪತ್ರ ಕ.ಆ.ಸಂ.-3 ಅನುಚ್ಛೇದ-24ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅನುದಾನದ ಬಿಲ್ಲನ್ನು ತಯಾರಿಸಿ ಸಲ್ಲಿಸತಕ್ಕದ್ದು.

ನಿರ್ದೇಶಕರು

ಇವರಿಗೆ ಸೂಕ್ತ ಕ್ರಮಕ್ಕಾಗಿ,

1) ಪ್ರಾಚಾರ್ಯರು – ಮೇಲ್ಕಂಡ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಗೆ.
2) ನಿರ್ದೇಶನಾಲಯದ ಬಿಎಲ್ಎಸ್(3)
3) ನಿರ್ದೇಶನಾಲಯದ ನಗದು ಶಾಖೆ.

ಪ್ರತಿ:

1) ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2) ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಚೇರಿ, ಕರ್ನಾಟಕ, ಬೆಂಗಳೂರು.
3) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇವರ ಮಾಹಿತಿಗಾಗಿ.
4) ಲೆಕ್ಕಾಧಿಕಾರಿಯವರು(ಬಿಲ್ಸ್), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5) ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6) ನಿರ್ದೇಶನಾಲಯದ ಐಎನ್ಎಸ್ (1), (2), (4) ಮತ್ತು ಆರ್ಇಸಿ(2).
7) ಮತ್ತು (8) ಹೆಚ್ಚುವರಿ ಪ್ರತಿ.
8) ಕಛೇರಿ ಪ್ರತಿ.